ಸ್ಕ್ರೂಗಳನ್ನು ಬೇರಾವ ಕೈಯೂ ಕೂರದಂತೆ ಕೆಡಿಸಿಬಿಟ್ಟರಾಯಿತು. ಅವನ ಕಳ್ಳತನವೇ ಬಂದ್. ಖ್ಯಾತ ಕಲಾವಿದರು, ಸಾಹಿತಿಗಳು, ಕುಶಲಕರ್ಮಿಗಳ ಕೈಗಳಿಗೆ ಅಪಾರ ಬೇಡಿಕೆ ಇರುತ್ತಿತ್ತು. ಕಳ್ಳತನವಾಗದಂತೆ ಅವರು ತಮ್ಮ ಕೈಗಳನ್ನು ಜಾಗ್ರತೆಯಾಗಿ ಕಾಯ್ದುಕೊಳ್ಳುತ್ತಿದ್ದರು. ತಮ್ಮ ಕೈ, ಕಾಲುಗಳಿಗೆ ವಿಮೆ ಇಳಿಸುತ್ತಿದ್ದರು. ವಿಮೆ ಇಳಿಸಲು ಇನ್ನೂ ನಾಲ್ಕು ಅವಯವ ಹೆಚ್ಚಿಗೆ ದೊರಕಿ ವಿಮಾ ಏಜಂಟರಿಗೂ, ಕಂಪನಿಗಳಿಗೂ ಲಾಭವಾಗುತ್ತಿತ್ತು. ರಾಜಕಾರಣಿಗಳಿಗೆ, ಸಾಧು ಸಂತರಿಗೆ ಹೆಚ್ಚಿನ ಅನುಕೂಲವಾಗುತ್ತಿತ್ತು. “ಆಶೀರ್ವಾದ ಪೂರ್ವಕವಾಗಿ ಶ್ರೀಯುತರು ತಮ್ಮ ಹಸ್ತವನ್ನು ಕಳಿಸಿದ್ದಾರೆ” ಇಲ್ಲವೆ “ಮಾನ್ಯ ಮಂತ್ರಿಗಳ ವಿಶೇಷ ಕೈಯ ಬೆಂಬಲ ನಮಗಿದೆ” ಎಂದು ಒಂದೇ ಸಮಯದಲ್ಲಿ ಅನೇಕ ಸಭೆ, ಸಮಾರಂಭಗಳಲ್ಲಿ ಭಾಗಿಯಾಗುತ್ತ ಚುನಾವಣೆ ಸಮಯದಲ್ಲಿ ಒತ್ತಡವನ್ನು ನೀಗಿಕೊಳ್ಳುತ್ತಿದ್ದರು.

ಬರೀ ಇಷ್ಟೇ ಅಲ್ಲ, ರಿಪ್ಲೇಸ್ಮೆಂಟ್‌ಗಳೂ ಆರಂಭವಾಗುತ್ತಿದ್ದವು. ಕೃತಕ ಕೈ, ಕಾಲುಗಳ ತಯಾರಿಕೆ ಹೆಚ್ಚಾಗುತ್ತಿತ್ತು. ತಮ್ಮದೇ ಗಾತ್ರ, ಬಣ್ಣ, ಅಳತೆಯ ಕೈ, ಕಾಲುಗಳನ್ನು ಆರ್ಡರ್ ಕೊಟ್ಟು ಮಾಡಿಸಬಹುದಾದರೆ... ಅಲ್ಲೂ ಚೈನಾ ಮೇಡ್, ಅಮೆರಿಕಾ ಮೇಡ್, ಮೇಡ್ ಇನ್ ಇಂಡಿಯಾಗಳ ಸ್ಪರ್ಧೆ ಜೋರಾಗಿರುತ್ತಿತ್ತು. ಅದರಲ್ಲೂ ಸಾಧಾರಣ, ಉತ್ತಮ, ಅತ್ಯುತ್ತಮ ಗುಣಮಟ್ಟದವು ದೊರಕಿ ಆಯ್ಕೆಗೆ ಲಭ್ಯವಾಗುತ್ತಿದ್ದವು. ಶ್ರೀಮಂತರು ಒಂದೆರೆಡು ಸ್ಪೇರ್‌ಗಳನ್ನು ಮನೆಯಲ್ಲಿ ಇಟ್ಟುಕೊಳ್ಳುತ್ತಿದ್ದರು – ಕೂಲಿಂಗ್ ಗ್ಲಾಸ್‌ಗಳಂತೆ. ದೊಡ್ಡ ದೊಡ್ಡ ಹಾಸ್ಪಿಟಲ್‌ನವರೆಲ್ಲ ತಾವೇ ನುರಿತ ವೈದ್ಯರಿಂದ ತಯಾರಿಸಿ ಅಳವಡಿಸುತ್ತಿದ್ದರು. ಅದಕ್ಕಾಗಿ ಬೇರೊಂದು ವಿಭಾಗವೇ ಸೃಷ್ಟಿಯಾಗಿ ಬಹು ಬೇಡಿಕೆಯಲ್ಲಿರುತ್ತಿತ್ತು.

ಪರೀಕ್ಷೆಗಳಲ್ಲೂ ‘ನಿಮ್ಮ ಮೂಲ ಕೈಗಳಿಂದಲೇ ಉತ್ತರ ಬರೆಯಬೇಕು’ ಎಂಬ ನಿಬಂಧನೆ ಇರುತ್ತಿತ್ತು. ಹಾಲ್ ಟಿಕೆಟ್ ಪರಿಶೀಲಿಸಿದ ನಂತರ ನಿಮ್ಮ ಕೈಗಳನ್ನೂ ಪರಿಶೀಲಿಸಲಾಗುತ್ತಿತ್ತು. ಬೇರೆ ಕೈಗಳಿಂದ ಬರೆದರೆ ಅದನ್ನು ಅಮಾನ್ಯ ಮಾಡಿ, ‘ಬೇರೆ ಕೈಗಳನ್ನು ಉಪಯೋಗಿಸಿದ್ದಕ್ಕೆ ಡಿಬಾರ್’ ಎಂಬ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿತ್ತು. ಎಲ್ಲಾ ಸ್ಪರ್ಧೆಗಳಲ್ಲೂ ‘ನಿಮ್ಮ ಒರಿಜಿನಲ್ ಕೈ, ಕಾಲುಗಳನ್ನೇ ಉಪಯೋಗಿಸಬೇಕು’ ಎನ್ನುವ ಕರಾರು ಕಾಣುತ್ತಿತ್ತು. ಯಾವುದೋ ಕಲಾಕೃತಿ, ಕಾವ್ಯ ಪ್ರಶಸ್ತಿ ಪಡೆದರೆ, “ಅಲ್ಲಿ ನನ್ನ ಕೈ ಕಳಿಸಿದ್ದೆ ಕಣಯ್ಯ” ಎಂದು ಸುಖಾ ಸುಮ್ಮನೆ ಹೇಳಿಕೊಳ್ಳುವವರಿಗೂ ಕಡಿಮೆ ಇರುತ್ತಿರಲಿಲ್ಲ. ಅದಕ್ಕೆ ‘ನುರಿತ ವೈದ್ಯರ ದೃಢೀಕರಣ ಪತ್ರವನ್ನು ಲಗತ್ತಿಸಿ’ ಎಂಬ ಒಕ್ಕಣೆಯೂ ಕಾಣುತ್ತಿತ್ತು.

ವೃದ್ಧರು ಮುಂಜಿ, ಮದುವೆಯ ರಿಸೆಪ್ಷನ್‌ಗಳಲ್ಲಿ, “ಅಬ್ಬಾ! ಸ್ಟೇಜ್ ಹತ್ತಿ ಹೋಗಕ್ಕೆ ಆಗಲ್ಲ ಕಣ್ರೀ. ಯಾರು ಹೋಗ್ತಿದೀರಾ? ನನ್ನ ಕೈ ತೆಗೆದುಕೊಂಡು ಹೋಗಿ ಆಶೀರ್ವಾದ ಮಾಡಿ ಬನ್ನಿ” ಎಂದು ಕೊಟ್ಟು ಕಳಿಸಬಹುದಿತ್ತು. ಸುಂದರವಾಗಿ ಅಲಂಕರಿಸಿಕೊಂಡ ಅವರ ಮೊಮ್ಮಗಳು, “ಅಜ್ಜಿ ಕೈ ಬಂತು. ಎಲ್ಲ ದಾರಿ ಬಿಡಿ. ಅವರ ಕೈನಲ್ಲಿ ಹೊಸ ಡಿಸೈನಿನ ಬಳೆ ನೋಡಿ” ಎಂದು ನುಲಿಯುತ್ತ ಹೋಗಿ ಅಕ್ಷತೆ ಹಾಕಿಸಿ ಬರುತ್ತಿದ್ದಳು. ದೊಡ್ಡ ದೊಡ್ಡ ದೇವಸ್ಥಾನಗಳಲ್ಲಿ ಭಕ್ತರು ಅರ್ಚಕರಿಗೆ, “ಸ್ವಾಮಿ, ದಯವಿಟ್ಟು ನಾಳೆ ಪೂಜೆಗೆ ನನ್ನ ಕೈ ಉಪಯೋಗಿಸಿ. ನಾನು ಸ್ವಾಮಿಯನ್ನು ಪೂಜಿಸಿದಂತಾಗುತ್ತದೆ” ಎಂದು ದುಂಬಾಲು ಬೀಳುತ್ತಿದ್ದರು. ಖ್ಯಾತ ದೇವಾಲಯಗಳಲ್ಲಿ ‘ನಿಮ್ಮದೇ ಸೇವೆ’ ಎಂಬ ಹೆಸರಿನ ಪೂಜೆಗಾಗಿ ನಿಮ್ಮ ಕೈ ಉಪಯೋಗಿಸಿ ಸ್ವಾಮಿಯನ್ನು ಮುಟ್ಟಿಸುವ ದುಬಾರಿ ಸೇವೆ ಆರಂಭವಾಗಬಹುದಿತ್ತು. ಹಾಗೆಯೇ ಲಂಚ ತೆಗೆದುಕೊಂಡವರೂ ಕೈಗಳನ್ನೇ ಬದಲಿಸಿ, “ಛೇ! ಛೆ! ಇವು ನನ್ನ ಕೈಗಳಲ್ಲ. ನಾನು ಲಂಚ